



ಗುಂಡ: ನೀವೇ ಶಿಕ್ಷೆ ಕೊಟ್ಟು ಬಿಡಿ ಮೇಡಂ.

ಮಹಿಳಾ ಪೊಲೀಸ್ ಇನ್‌ಸ್ಪೆಕ್ಟರ್: ಎಫ್‌ಐಆರ್, ಕೋರ್ಟು ಅಂತೆಲ್ಲಾ ಪ್ರೊಸೀಜರ್‌ಗಳಿವೆ.

ಗುಂಡ: ಅದೆಲ್ಲಾ ಇಲ್ದೆ, ಬೇರೆ ದಾರಿ ಇದೆ. ನೀವು ಮನಸ್ಸು ಮಾಡಬೇಕು.

ಇನ್‌ಸ್ಪೆಕ್ಟರ್: ಯಾವ ದಾರಿ?

ಗುಂಡ: ಮದುವೆ!

★★★

ಗುಂಡ: ಭಾನುವಾರ ವೀಕ್ಲಿ ಹಾಲಿಡೆ ಅಂತ ಯಾಕೆ ಮಾಡಿದ್ರೊ?

ಗುಂಡನ ಗೆಳೆಯ: ನಿನ್ನಂಥವರಿಗೇ ಅಂತ ಮಾಡಿರಬಹುದು.

ಗುಂಡ: ಅಂದ್ರೆ?

ಗೆಳೆಯ: ವಾರಕ್ಕೊಂದು ದಿನವಾದರೂ ಸ್ನಾನ ಮಾಡಲಿ ಅಂತ!

(ಸಂ)-ಹಾಡ್ಯ. ಬ .ಜಯಾನಂದ

ಹೆಂಡತಿ: (ಗಂಡನಿಗೆ) ರೀ ಕಮಲಮ್ಮನಿಗೆ ಅವರ ಗಂಡ ಹೊಸ ಸೀರೆ ತೆಗೆದು ಕೊಟ್ಟರಂತೆ, ನೀವೂ ಇದೀರಾ?

ಗುಂಡ: ನಾನೂ ತಂದು ಕೊಡಬಹುದು ಕಣೇ, ಆದರೆ ನೀನು ಸುಮ್ಮನಿರಬೇಕಲ್ಲ!

★★★



ರೋಗಿ: ಡಾಕ್ಟ್ರೇ ಈ ಎರಡು ಮಾತ್ರೆಗಳನ್ನು ಯಾವಾಗ ತೆಗೆದುಕೊಳ್ಳಬೇಕು?

ಡಾಕ್ಟ್ರು: ರಾತ್ರಿ ಒಂದು, ಬೆಳಿಗ್ಗೆ ಎದ್ದರೆ ಇನ್ನೊಂದು!

★★★

ಗುಂಡ: (ನೇತ್ರ ತಜ್ಞನಿಗೆ), ಡಾಕ್ಟ್ರೇ, ನನ್ನ ಹೆಂಡತಿಗೆ ಕಣ್ಣು ಉರಿಯುತ್ತಿದೆ!

ನೇತ್ರ ತಜ್ಞ: ಯಾವಾಗಿನಿಂದ ಹಾಗಾಗುತ್ತಿದೆ?

ಗುಂಡ: ಪಕ್ಕದ ಮನೆಯಾಕೆಯ ಹೊಸ ಚಿನ್ನದ ನೆಕ್ಲೆಸ್ ನೋಡಿದಾಗಿನಿಂದ.

(ಸಂ)-ಎಂ.ಮೋಹನ್ ರಾವ್


